**ದಿನಾಂಕಃ 26.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

7. ನಾನು ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಮತ್ತೊಂದು ದಾವಾ ಸಂಖ್ಯೆ 360/14 ರಂತೆ ವಿಭಾಗ ಕೋರಿ ಹಾಕಿರುತ್ತೇನೆಂದರೆ ಸರಿ. ಸದರಿ ದಾವೆಯಲ್ಲಿ ನಾನು ಸರ್ವೆ ನಂ.89/2 ಹಾಗೂ 89/1 ರ ಅಂದರೆ ಪ್ರಸ್ತುತ ದಾವೆಯ ಐಟಂ ನಂ.1 ಮತ್ತು 7 ರ ಸಂಬಂಧ ಹಾಕಿರುತ್ತೇನೆಂದರೆ ಸರಿ. ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ನಾನು ಪ್ರಸ್ತುತ ದಾವೆಯಲ್ಲೂ ಸಲ್ಲಿಸಿರುತ್ತೇನೆಂದರೆ ಸರಿ. ಪ್ರಸ್ತುತ ದಾವಾ ಸ್ವತ್ತಿನ ಐಟಂ ನಂ.1 ಮತ್ತು 7, 3ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸಾಕ್ಷಿಯು ಅವು ಪಿತ್ರಾರ್ಜಿತ ಸ್ವತು ಎಂದು ನುಡಿಯುತ್ತಾರೆ. ಈ ಹಿಂದೆ ವಿಭಾಗವಾಗಿರುವಂತೆ ಸರ್ವೆ ನಂ.73 ರಲ್ಲಿ ನನಗೆ ಬಂದ ಪಾಲಿನಲ್ಲಿ ನಾನು ಸ್ವಾಧೀನದಲ್ಲಿದ್ದೇನೆಂದರೆ ಸರಿಯಲ್ಲ. ನಾವು ಅಣ್ಣ ತಮ್ಮಂದಿರು ಮಾಡಿಕೊಂಡಿರುವ ವಿಭಾಗ ಪತ್ರವೂ ನನ್ನ ಸುರ್ಪದಿಯಲ್ಲಿರುತ್ತದೆಂದರೆ ಸುಳ್ಳು. ಸದರಿ ವಿಭಾಗ ಪತ್ರವೂ ನನ್ನ ಬಳಿ ಇರುವ ಕಾರಣ ಪ್ರಸ್ತುತ ದಾವಾ ಐಟಂ ನಂ.1 ಮತ್ತು 7 ನ್ನು ಪಡೆಯುವ ಉದ್ದೇಶದಿಂದ ಈ ರೀತಿ ಸುಳ್ಳು ದಾವೆ ಹಾಕಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ 1 ಎಕರೆಗೆ ಸರಿ ಸುಮಾರು 40 ರಿಂದ 50 ಲಕ್ಷ ಮೌಲ್ಯ ನಡೆಯುತ್ತಿದೆ ಎಂದರೆ ಸರಿ.

8. ಈ ಮುಂಚೆಯೇ ವಿಭಾಗವಾಗಿದ್ದರೂ ಸಹಿತ ಕೇವಲ 3ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳನ್ನು ಪಡೆದುಕೊಳ್ಳುವ ದುರುದ್ದೇಶದಿಂದ ಪ್ರಸ್ತುತ ದಾವೆ ಹಾಕಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕೇವಲ 3ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳ ಮೇಲೆ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವೆ ಹಾಕಿದ್ದು ನಂತರ ಪ್ರಸ್ತುತ ದಾವೆಯಲ್ಲಿ ಎಲ್ಲಾ ಸ್ವತ್ತುಗಳನ್ನು ಹಾಕಿದ್ದು ಎಂದರೆ ವಕೀಲರು ಹಿಂಪಡೆಯುವ ಉದ್ದೇಶದಿಂದ ಈ ದಾವೆ ಹಾಕಿದ್ದು ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಮೌಲ್ಯ ಅಧಿಕವಾಗಿರುವುದರಿಂದ ಈ ನ್ಯಾಯಾಲಯದಲ್ಲಿ ನಡೆಸಲು ಬರುವುದಿಲ್ಲ ಎಂದರೆ ಸಾಕ್ಷಿಯು

ಅದು ಒಟ್ಟು ಕುಟುಂಬದ ಆಸ್ತಿ ಎಲ್ಲರಿಗೂ ಪಾಲು ಇರುವುದರಿಂದ ನಡೆಸಬಹುದು ಎಂದು ನುಡಿಯುತ್ತಾರೆ. ವಿಭಾಗವಾಗಿದ್ದರೂ ಸಹಿತ ಆಗಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**